28 Sep 2022

ಆರ್ಥಿಕ ಸುಧಾರಣೆಗೆ ಹೈನುಗಾರಿಕೆ ವರದಾನ



ತಾವರೆಕೆರೆ: ಕೃಷಿಕರು ಹೈನುಗಾರಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವುದರಿಂದ ಹೈನೋದ್ಯಮ ಬೆಳವಣಿಗೆ ಕಾಣಲು ಸಾಧ್ಯವಾಗುತ್ತದೆ. ಆರ್ಥಿಕ ಸಂಕಷ್ಟದಿಂದ ಪಾರಾಗಲು ಹೈನುಗಾರಿಕೆ ರೈತರಿಗೆ ವರದಾನವಾಗಿದೆ ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಜೆ. ರಾಜಣ್ಣ ತಿಳಿಸಿದರು.

ತಾಲೂಕಿನ ನೆಲವಾಗಿಲು ಗ್ರಾಪಂ ವ್ಯಾಪ್ತಿಯ ಆರೇಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಾಲು ಉತ್ಪಾದಕರಿಗೆ ಸರಕಾರ ಮತ್ತು ಬಮೂಲ್ ಮತಿಯಿಂದ ಹೆಚ್ಚುವರಿಯಾಗಿ ಪ್ರೋತ್ಸಾಹ ಧನ ನೀಡಿ ಆರ್ಥಿಕ ಮಟ್ಟ ಉತ್ತಮ ಪಡಿಸುವ ದಿಸೆಯತ್ತ ಮುನ್ನಡೆಯುತ್ತಿದೆ. ಕೃಷಿಕರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಉತ್ತೇಜಿಸ ಬೇಕು. 2021-22ನೇ ಸಾಲಿನಲ್ಲಿ ಸಂಘಕ್ಕೆ ವ್ಯಾಪಾರ ಲಾಭ 9.99 ಲಕ್ಷ ರೂ. ಗಳಲ್ಲಿ ನಿವ್ವಳ ಲಾಭ 5.53 ಲಕ್ಷ ರೂ. ಬಂದಿದೆ. ರೈತರಿಗೆ ಶೇ. 2.1 ರಷ್ಟು ಬೋನಸ್ ವಿತರಿಸಲಾಗುವುದು ಎಂದರು.

ಹೊಸಕೋಟೆ ಶಿಬಿರದ ಮಾರ್ಗ ವಿಸ್ತರಣಾಧಿಕಾರಿ ಟಿ.ಎಂ. ಆನಂದ್ ಮಾತನಾಡಿ, ಗುಣಮಟ್ಟದ ಹಾಲನ್ನು ಪಡೆಯಲು ರಾಸುಗಳಿಗೆ ಒಳ್ಳೆಯ ಪೌಷ್ಟಿಕಾಂಶ ಭರಿತ ಆಹಾರವನ್ನು ನೀಡುವುದಲ್ಲದೇ ರೋಗಗಳು ಬಾರದಂತೆ ಆರ್ಯುವೇದ ಮೂಲಿಕೆ ಬಳಕೆ ಮಾಡಬೇಕು. ವೈಜ್ಞಾನಿಕ ಪದ್ಧತಿಯಲ್ಲಿ ಮೇವು ಬಳಕೆ, ಸ್ವಚ್ಛತೆಯಿಂದ ಕೆನೆಭರಿತ ಹಾಲು ಉತ್ಪಾದಿಸಿ ಹೆಚ್ಚಿನ ಲಾಭ ಗಳಿಸಲು ಸಾಧ್ಯವಾಗುತ್ತದೆ ಎಂದರು.

ಕೃಷಿಕರು ಹೈನುಗಾರಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವುದರಿಂದ ಹೈನೋದ್ಯಮ ಬೆಳವಣಿಗೆ ಕಾಣಲು ಸಾಧ್ಯವಾಗುತ್ತದೆ. ಹಾಲು ಉತ್ಪಾದಕರಿಗೆ ಸರಕಾರ ಮತ್ತು ಬಮೂಲ್ ಮತಿಯಿಂದ ಹೆಚ್ಚುವರಿಯಾಗಿ ಪ್ರೋತ್ಸಾಹ ಧನ ನೀಡಿ ಆರ್ಥಿಕ ಮಟ್ಟ ಉತ್ತಮ ಪಡಿಸುವ ದಿಸೆಯತ್ತ ಸಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ 2021-22ನೇ ಸಾಲಿನಲ್ಲಿ ಸಂಘಕ್ಕೆ ಅತಿ ಹೆಚ್ಚು ಹಾಲು ಪೂರೈಕೆ ಮಾಡಿದ ಮೂವರು ಸದಸ್ಯರಿಗೆ ಹಾಲಿನ ಕ್ಯಾನ್ ನೀಡಿ ಸನ್ಮಾನಿಸಲಾಯಿತು.

ಈವೇಳೆಗ್ರಾಪಂ.ಸದಸ್ಯ ಬಸವರಾಜ್,ಎಂಪಿಸಿಎಸ್ ಉಪಾಧ್ಯಕ್ಷ ಸುವರ್ಣ, ನಿರ್ದೇಶಕರುಗಳಾದ ನರಸಿಂಹ ರೆಡ್ಡಿ, ದೇವರಾಜ್, ಕೃಷ್ಣಪ್ಪ ಎಸ್. ರಮೇಶ್, ಪಿಳ್ಳೇಗೌಡ, ಹೇಮಾವತಮ್ಮ, ಚಂದ್ರಿಕಾ, ಮಂಜುಳ, ಮುಖ್ಯ ಕಾರ್ಯನಿರ್ವಹಕ ಎ.ಎಂ. ಚಂದ್ರಪ್ಪ ಹಾಲು ಪರೀಕ್ಷಕ ಎಂ. ನಾಗರಾಜ್, ಸಹಾಯಕ ರಾಜಣ್ಣ ಹಾಗೂ ರೈತರು ಹಾಜರಿದ್ದರು.

28.09.2022
Hosa Digantha p.07



ಬೆಂಗಳೂರು ಕೃಷಿ ವಿ.ವಿಯಲ್ಲಿ ನಡೆದ ತರಬೇತಿಗೆ ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ ಚಾಲನೆ ನೀಡಿದರು

'ತಂತ್ರಜ್ಞಾನ ಬಳಸಿ ಕೃಷಿಕರ ಮನೆಗೆ ಮಾಹಿತಿ'

ಬೆಂಗಳೂರು: 'ಕೃಷಿ ತಂತ್ರಜ್ಞಾನಗಳ ಶೀಘ್ರ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಅವಶ್ಯ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ ಹೇಳಿದರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಈಚೆಗೆ ಆಯೋಜಿಸಿದ್ದ ತರಬೇತಿಯಲ್ಲಿ ಅವರು ಮಾತನಾಡಿದರು.

'ಕೃಷಿ ಸಂಬಂಧಿತ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸಿಬ್ಬಂದಿ ಕೊರತೆಯಿದೆ. ವಾಟ್ಸ್‌ಆ್ಯಪ್, ಯುಟ್ಯೂಬ್ ಮತ್ತು ಕೃಷಿ ಆ್ಯಪ್‌ಗಳ ಮೂಲಕ ನೂತನ ತಂತ್ರಜ್ಞಾನವನ್ನು ಕೃಷಿಕರ ಮನೆ ಬಾಗಿಲಿಗೇ ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚಿನ ರೈತರಿಗೆ ತಲುಪಲು ಡಿಜಿಟಲ್ ತಂತ್ರಜ್ಞಾನ ಸಹಕಾರಿ' ಎಂದು ಹೇಳಿದರು.

ತರಬೇತಿ ಸಂಯೋಜಕ ಡಾ.ಕೆ. ಶಿವರಾಮು ಅವರು ಕೃಷಿಯಲ್ಲಿ ಮೊಬೈಲ್ ಆ್ಯಪ್ ಬಳಕೆ, ಬದಲಾಗುತ್ತಿರುವ ಹವಾಮಾನದಲ್ಲಿ ಡಿಜಿಟಲ್ ತಂತ್ರಜ್ಞಾನ ಸ್ಥಿತಿಸ್ಥಾಪಕತ್ವ, ಭೌಗೋಳಿಕ ಮಾಹಿತಿ ವ್ಯವಸ್ಥೆಯ ಅಳವಡಿಕೆ, ಮಾರುಕಟ್ಟೆಯಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಕೆ, ಕೃಷಿ ಸ್ಟಾರ್ಟ್‌ಅಪ್‌ಗಳ ಕುರಿತು ಮಾಹಿತಿ ನೀಡಿದರು.

ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕಿ ಡಾ.ಎ.ಶೈಲಜಾ, ಡಾ.ಕಲ್ಪನಾ, ಡಾ.ಆರ್.ನಾರಾಯಣ ರೆಡ್ಡಿ, ಡಾ.ಸಿ.ವಿ.ವೆಂಕಟೇಶಮೂರ್ತಿ ಭಾಗವಹಿಸಿದ್ದರು.

28.09.2022
Prajavani p.03

ಬಿತ್ತನೆಗೆ ರೈತರು ರೆಡಿ । ಸರಕಾರದ ನಿರ್ಲಕ್ಷ್ಯ

ಶೇಂಗಾ ಬೀಜ ಪೂರೈಸದ ನಿಗಮ

■ ಮಲ್ಲಪ್ಪ ಸಂಕೀನ್ ಯಾದಗಿರಿ
mallappa.sankin@timesgroup.com

ರಾಜಕೀಯದ ಆರೋಪ-ಪ್ರತ್ಯಾರೋಪದಲ್ಲೇ ಆಡಳಿತ ಮತ್ತು ಪ್ರತಿಪಕ್ಷದ ನಾಯಕರು ಕಾಲಹರಣ ಮಾಡುತ್ತಿದ್ದರೆ, ಇತ್ತ ಹಿಂಗಾರು ಹಂಗಾಮಿನಲ್ಲಿ ಶೇಂಗಾ ಬಿತ್ತನೆ ಮಾಡಲು ರಾಷ್ಟ್ರೀಯ ಬೀಜ ನಿಗಮವು ಬೀಜ ಪೂರೈಕೆ ಮಾಡದ ಹಿನ್ನೆಲೆಯಲ್ಲಿ ನಾಡಿನ ಅನ್ನದಾತರು ಪರದಾಡುತ್ತಿದ್ದಾರೆ.

ಸಕಾಲಕ್ಕೆ ರೈತರಿಗೆ ಶೇಂಗಾ ಬಿತ್ತನೆ ಬೀಜ ಪೂರೈಕೆ ಮಾಡುವುದು ಸರಕಾರದ ಜವಾಬ್ದಾರಿಯಾಗಿದೆ. ಭೂಮಿ ಹದ ಮಾಡಿಕೊಂಡು ಶೇಂಗಾ ಬೀಜ ಬಿತ್ತನೆಗೆ ರೈತರು ಕೂಡ ಸಿದ್ಧರಾಗಿದ್ದಾರೆ. ಆದರೆ ಶೇಂಗಾ ಬೀಜ ಮಾತ್ರ ಲಭ್ಯವಿಲ್ಲ, ಹೀಗಾಗಿ ಅವರು ಬೀಜಕ್ಕಾಗಿ ಪರಿತಪಿಸುವಂತಾಗಿದೆ.

12 ಸಾವಿರ ಕ್ವಿಂಟಾಲ್ ಬೀಜ ಅಗತ್ಯ

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆ ಮಾಡುವ ಗುರಿ ಹೊಂದಲಾಗಿದೆ. ಇದಕ್ಕಾಗಿಯೇ 12 ಸಾವಿರ ಕ್ವಿಂಟಾಲ್ ಬೀಜ ಬೇಕಾಗುತ್ತದೆ. ಕೃಷಿ ಇಲಾಖೆಯೂ ಈಗಾಗಲೇ ಪ್ರಸ್ತಾವನೆ ಕಳುಹಿಸಿದೆ. ಕರ್ನಾಟಕ ರಾಜ್ಯ ಬೀಜ ನಿಗಮ ಮೂಲಕ ರಾಷ್ಟ್ರೀಯ ರಾಜ್ಯ ಬೀಜ ನಿಗಮಕ್ಕೆ ಪ್ರಸ್ತಾವನೆ ಕೂಡ ಹೋಗಿದೆ. ಆದರೆ ಸಕಾಲಕ್ಕೆ ಬೀಜ ಮಾತ್ರ ಪೂರೈಕೆ ಆಗಿಲ್ಲ.

ವಿಳಂಬಕ್ಕೆ ಬೇಸರ: ರಾಷ್ಟ್ರೀಯ ಬೀಜ ನಿಗಮದ ಮೂಲಕ ಬೀಜ ವಿತರಣೆ ಮಾಡಬೇಕಿತ್ತು. ಸರಕಾರದ ರಾಜಕೀಯ ಕಿತ್ತಾಟದಿಂದ ಬೀಜ ವಿತರಣೆ ವಿಳಂಬ ಆಗುತ್ತಿದೆ. ಖಾಸಗಿ ಬೀಜ ಮಾರಾಟಗಾರರಿಂದ ಖರೀದಿ ಮಾಡಬೇಕಾದರೆ ಬೆಲೆ ಹೆಚ್ಚಳದಿಂದ ರೈತರ ಹಿಂದೇಟು ಹಾಕುವಂತಾಗಿದೆ. ಹೀಗಾಗಿ ರಿಯಾಯಿತಿ ದರದಲ್ಲಿ ಸರಕಾರ ಬೇಗನೆ ಶೇಂಗಾ ಬಿತ್ತನೆ ಬೀಜ ವಿತರಣೆ ಮಾಡಿದರೆ ಅನುಕೂಲವಾಗುತ್ತದೆ. ಆದರೆ ವಿಳಂಬ ಮಾಡುತ್ತಿರುವ ಪರಿಣಾಮವಾಗಿ ಅನ್ನದಾತರು ರೋಸಿ ಹೋಗಿದ್ದಾರೆ. ಬೀಜ ನೀಡಲು ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆ ಎಂದು ರೈತರ ಆರೋಪವಾಗಿದೆ.



ಶೇಂಗಾ ಬೀಜ ಪೂರೈಕೆ ಮಾಡುವಂತೆ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಳೆ ಜಾಸ್ತಿ ಆಗಿರುವ ಪರಿಣಾಮ ಭೂಮಿಯಲ್ಲಿ ತೇವಾಂಶ ಹೆಚ್ಚಿದೆ. ಹೀಗಾಗಿ ಬೀಜ ವಿತರಣೆಯಲ್ಲಿ ಸ್ವಲ್ಪ ವಿಳಂಬವಾಗಿದೆ. ಒಂದೆರಡು ದಿನದಲ್ಲಿಯೇ ರೈತರಿಗೆ ಶೇಂಗಾ ಬೀಜ ವಿತರಿಸಲಾಗುವುದು.

-ಆಬಿದ್ ಎಸ್.ಎಸ್.
ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಯಾದಗಿರಿ.

ಸಕಾಲಕ್ಕೆ ಬೀಜ ಪೂರೈಸುವಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ. ಬರೀ ಕುಂಟು ನೆಪ ಹೇಳುತ್ತಿದ್ದಾರೆ. ಭೂಮಿ ತೇವಾಂಶ ಕಡಿಮೆ ಆಗಿದೆ. ಆಗಿಲ್ಲವೆಂದು ಕೃಷಿ ಇಲಾಖೆ ಅಧಿಕಾರಿಗಳು ಸುಳ್ಳು ಹೇಳಿ ತಮ್ಮ ತಪ್ಪು ಮುಚ್ಚಿಕೊಳ್ಳಲು ಮುಂದಾಗಿದ್ದಾರೆ.

-ಹನೀಸಾಬ್ ಖುರೇಶಿ ಹತ್ತಿಕುಣಿ,
ಜಿಲ್ಲಾಧ್ಯಕ್ಷ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ

ಆದರೆ ಕೃಷಿ ಇಲಾಖೆ ಅಧಿಕಾರಿಗಳು ಸಬೂಬು ನೀಡುತ್ತಿದ್ದಾರೆ. ಮಳೆ ಜಾಸ್ತಿ ಆಗಿರುವುದರಿಂದ ತೇವಾಂಶ ಹೆಚ್ಚಳವಾಗಿದೆ. ಮುಂಚಿತವಾಗಿ ಬೀಜ ದಾಸ್ತಾನು ಮಾಡಿಕೊಂಡರೆ ಬೂಸ್ಟು ಬರುತ್ತದೆ ಎಂಬ ಕಾರಣಕ್ಕೆ ದಾಸ್ತಾನು ಮಾಡಿಕೊಂಡಿಲ್ಲ, ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎನ್ನುತ್ತಾರೆ. ಇತ್ತ ಅನ್ನದಾತರು ಕೃಷಿ ಇಲಾಖೆ ಅಧಿಕಾರಿಗಳು ತಪ್ಪು ಮಾಹಿತಿ ನೀಡುತ್ತಾರೆಂದು ಹೇಳುತ್ತಾರೆ.

28.09.2022
Vijaya Kar. p.08